ಆಕೆ ತನ್ನ ಮುಖದ ಮೇಲಿನ ನರೆ ಗೂದಲನ್ನು ಸರಿಪಡಿಸಿಕೊಳ್ಳುತ್ತಾ ಕಿಟಕಿಯ ಹೊರಕ್ಕೆ ನೋಡಿದರು. ಮಳೆ ಹನಿಯುತ್ತಿದ್ದ ರಸ್ತೆಯಲ್ಲಿ ಕೈನಲ್ಲಿ ಕೆಲ ಕಾಗದಗಳನ್ನು ಹಿಡಿದುಕೊಂಡು ಆಕೆಯ ಮಗ ಬರುತ್ತಿದ್ದ. ತನ್ನ ತಂದೆಯಂತೆಯೇ ಒಂದು ಪಕ್ಕಕ್ಕೆ ಬಾಗಿ, ಒಂದು ವಿಶಿಷ್ಟ ರೀತಿಯಲ್ಲಿ ನಡೆದು ಬರುತ್ತಿದ್ದ ಮಗನನ್ನು ನೋಡಿ ಆಕೆ ಹೇಳಿದರು, 'ರವಿ ಬರುತ್ತಿದ್ದಾನೆ'. ಅವನು ಮನೆಯೊಳಗೆ ಬಂದು ಕಾಗದಗಳನ್ನು ಮೇಜಿನ ಮೇಲಿಟ್ಟು ತಾಯಿಗೆ ಹೇಳಿದ, 'ಅಮ್ಮ, ಟೀ ಕೊಡುತ್ತೀಯಾ?' ಹಾಗೆ ಕೇಳಿದ ನಂತರ ತಂದೆಯ ಬಳಿ ಹೋಗಿ, ಚುಟ್ಟದ ಕಟ್ಟನ್ನು ಮೇಜಿನ ಮೇಲಿಟ್ಟು 'ಅಪ್ಪ, ನಿಮ್ಮ ಚುಟ್ಟ' ಎಂದ.

ದಿನವೂ ಆಫೀಸಿನಿಂದ ಬರುವಾಗ ರವಿ ಅಪ್ಪನಿಗೆಂದು ಚುಟ್ಟ ತರುತ್ತಾನೆ. ಅದು ಬಿಳಿ ಬಣ್ಣದ ಕವರ್‌ನಿಂದ ಕಟ್ಟಿರುತ್ತದೆ. ಅಪ್ಪಾವು ಮೇಜಿನ ಮೇಲಿಟ್ಟ ಚುಟ್ಟದ ಕಟ್ಟನ್ನು ಬಿಚ್ಚಿ ನೋಡಿ ವ್ಯಂಗ್ಯವಾಗಿ ಹೇಳಿದರು. 'ಈ ಜಾತಿ ಚುಟ್ಟ ಬೇಡ ಎಂದು ಎಷ್ಟು ದಿನಗಳಿಂದ ನಾನು ಹೇಳುತ್ತಿದ್ದೇನೆ. ಇದನ್ನು ಸೇದಿ ಸೇದಿ ನನ್ನ ಗಂಟಲು ಹರಿಯುತ್ತಿದೆ. ಈ ಊರಲ್ಲಿ ಬೇರೆ ಜಾತಿ ಚುಟ್ಟ ಸಿಗುವುದಿಲ್ಲವೇನು?'

ಮಗನ ಮುಖದಲ್ಲಿದ್ದ ಸಂತೋಷ ಭಾವ ತಕ್ಷಣ ಮಾಯವಾಯಿತು. ಮ್ಲಾನವದನನಾಗಿ ಹೇಳಿದ, 'ಬೇರೆ ಜಾತಿ ಚುಟ್ಟ ಬೇಕೆಂದು ನೀವು ಹೇಳಿದ್ದು ನನಗೆ ಜ್ಞಾಪಕವಿಲ್ಲ'.

'ಇಲ್ಲಪ್ಪಾ, ನಾನು ಹೇಳಲೇ ಇಲ್ಲ' ಅಪ್ಪ ಮಗನ ಮುಖವನ್ನೇ ನೋಡುತ್ತಾ ಹೇಳಿದರು. 'ಇದರ ಬೆಲೆ ಅದಕ್ಕಿಂತ ನಾಲ್ಕು ಕಾಸು ಕಡಿಮೆಯಿದ್ದರೆ ಇನ್ನು ಮೇಲೆ ಇದನ್ನೇ ತೆಗೆದುಕೊಂಡು ಬಾ. ಇದನ್ನೇ ಸೇದಿ ಸ್ವಲ್ಪ ಸ್ವಲ್ಪವಾಗಿ ನಾನು ಸಾಯುತ್ತೇನೆ. ಆಗ ನಿಮಗೆಲ್ಲಾ ನನ್ನ ಕಾಟ ತಪ್ಪುತ್ತಲ್ಲ...'

ರವಿ ಹೇಳಿದ, 'ಅಪ್ಪಾ, ಈ ಚುಟ್ಟ ನಿಮಗೆ ಬೇಡವೆನಿಸಿದರೆ ಹೇಳಿ. ಈಗಲೇ ಹೋಗಿ ನಾನು ಬೇರೆ ತೊಗೊಂಡು ಬರುತ್ತೇನೆ'.

ಅದನ್ನು ಕೇಳದೆಯೇ ಅಪ್ಪ ತಮ್ಮ ಮಾತು ಮುಂದುವರೆಸಿದರು. 'ನಾನು ಹೇಳುವುದನ್ನು ಕೇಳಲು ಇಲ್ಲಿ ಯಾರಿಗಾದರೂ ಸಮಯವಿದೆಯೇ? ಅಲ್ಲದಿದ್ದರೂ ನನ್ನ ಸುಖ ದುಃಖಗಳನ್ನು ತಿಳಿದುಕೊಂಡು ನಿಮಗೆ ಏನಾಗಬೇಕು? ನೀವು ನನ್ನನ್ನು ಏನೆಂದುಕೊಂಡಿದ್ದೀರಿ ಎಂದು ನನಗೆ ಚೆನ್ನಾಗಿ ಗೊತ್ತು.' ಅಪ್ಪಾವ್ರ ಧ್ವನಿ ಸೂಕ್ಷ್ಮವಾಗತೊಡಗಿತ್ತು. ತಲೆ ತಗ್ಗಿಸಿ ಕಣ್ಣುಗಳನ್ನು ತಗ್ಗಿಸಿ ನೆಲವನ್ನೇ ನೋಡುತ್ತಾ ಯಾರೊಂದಿಗೂ ಅಲ್ಲವೆಂಬಂತೆ ಹೇಳುತ್ತಿದ್ದರವರು.

'ಸ್ವಲ್ಪ ಹೊತ್ತು ಮಲಗೋಣವೆಂದರೆ ನೀವು ಬಿಡುತ್ತೀರಾ? ಕಣ್ಣು ಮುಚ್ಚಿದಾಗ ನಾನು ಎಲ್ಲವನ್ನು ಮರೆತಿರುತ್ತೇನೆ. ಆಗಲೇ ನೀವು ನನ್ನನ್ನು ಎಬ್ಬಿಸಿ ಬಿಡುತ್ತೀರಿ.'

ತಾಯಿ ಮಗನೊಂದಿಗೆ ಹೇಳಿದಳು, 'ಐದು ಗಂಟೆ ಹೊಡೆದ ನಂತರವೇ ಟೀ ತಣ್ಣಗಾಗಿ ಹೋಗುತ್ತದಲ್ಲಾ ಎಂದು ನಾನು ಇವರನ್ನು ಎಬ್ಬಿಸಿದ್ದು. ನಾನು ಏನು ಮಾಡಿದರೂ ಅದೆಲ್ಲಾ ತಪ್ಪೇ' ಆಕೆ ನಿಟ್ಟುಸಿರ್ಗರೆದರು.

ಅಪ್ಪಾವು ಹೇಳಿದರು, 'ನೀನು ಮಾಡುವುದು ಯಾವುದೂ ತಪ್ಪಲ್ಲ. ಹಾಗಾದರೆ ಕೊಳೆಯಾದ ಬಟ್ಟೆಯನ್ನು ಒಗೆಯದೆ ತಂದು ಕೊಟ್ಟಿದ್ದು, ಸಕ್ಕರೆ ಹಾಕದೆ ಟೀ ತಂದು ಕೊಟ್ಟದ್ದು ಇವೆಲ್ಲಾ ನಾನು ಮಾಡಿದ ತಪ್ಪುಗಳೇ ಅಲ್ಲವೇ?'

'ನೀವು ಬಾಯಿಗೆ ಬಂದಂತೆ ಮಾತನಾಡಿ ಎಲ್ಲಾ ನಾನು ಸಹಿಸುತ್ತೇನೆ. ಇದೆಲ್ಲಾ ಇಂದು, ನಿನ್ನೆ ಪ್ರಾರಂಭಿಸಿದ್ದಲ್ಲ. ಎಲ್ಲಾ ನನ್ನ ಹಣೆಬರಹ. ನೀವು ಯಾವಾಗಲಾದರೂ ನನ್ನ ಮನಸ್ಸಿಗೆ ನೆಮ್ಮದಿ ಕೊಟ್ಟಿದ್ದೀರಾ?' ತಾಯಿಯ ಕಣ್ಣುಗಳಲ್ಲಿ ನೀರು ತುಂಬತೊಡಗಿತು.

'ನೀನೇನು ಭಾಷಣ ಮಾಡೋಣ ಅಂತ ಇದ್ದೀಯೇನು?' ಮುಗಿಯುತ್ತಿದ್ದ ಚುಟ್ಟವನ್ನು ನೆಲಕ್ಕೆ ಎಸೆಯುತ್ತಾ ಅಪ್ಪಾವು ಹೇಳಿದರು. ಆಕೆ ಉತ್ತರ ಕೊಡಲಿಲ್ಲ. ಆಡಬಾರದ ಮಾತನ್ನೇನೋ ಆಡಿದಂತೆ ನೆಲಕ್ಕೆ ಕಣ್ಣು ಕೀಲಿಸಿ ನಿಂತಳು. ಆಕೆಯ ಆ ನಿಲುವು ಅಪ್ಪಾವ್ರಿಗೆ ಮಾತನಾಡಲು ಉತ್ತೇಜನ